# ಸುದ್ದಿ ಸಂಚಯ

**ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾದ**
**ಪರಮಪೂಜ್ಯ ಸ್ವಾಮಿ ರಂಗನಾಥಾನಂದಜಿ ಮಹಾರಾಜ್ ಅವರ ಮೈಸೂರು ಭೇಟಿ.**

ಪೂಜ್ಯ ಸ್ವಾಮೀಜಿಯವರು ೨೬-೦೩-೨೦೦೩ರಂದು ಬೆಳಿಗ್ಗೆ ಮೈಸೂರು ಶ್ರೀರಾಮಕೃಷ್ಣ ಆಶ್ರಮಕ್ಕೆ ಬಂದು ೩೦-೦೩-೨೦೦೩ರಂದು ಬೆಂಗಳೂರಿಗೆ ತೆರಳಿದರು. ಅವರು ಇಲ್ಲಿ ಇರುವಷ್ಟು ಕಾಲವೂ ಶುದ್ಧ ಆನಂದದ ಹೊನಲನ್ನು ಸುತ್ತಲೂ ಹರಡುತ್ತ ಒಂದು ಆನಂದೋತ್ಸವದ ವಾತಾವರಣವನ್ನು ಸೃಷ್ಟಿಸಿದರು. ಪ್ರತಿದಿನವೂ ನೂರಾರು ಭಕ್ತರು ಬಂದು ಅವರ ದರ್ಶನವನ್ನು ಪಡೆದು ಹೋಗುತ್ತಿದ್ದರು. ದೂರಪ್ರದೇಶಗಳಿಂದಲೂ ಭಕ್ತಾದಿಗಳು ಅವರ ದರ್ಶನಕ್ಕಾಗಿ ಬರುತ್ತಿದ್ದರು. ಮಂಗಳೂರು, ಪೊನ್ನಂಪೇಟೆ, ಊಟಿ, ಕೊಯಮತ್ತೂರು ಮುಂತಾದ ಸ್ಥಳಗಳಿಂದ ಅನೇಕ ಸಾಧು ಸಂನ್ಯಾಸಿಗಳು ಬಂದು ಅವರ ದರ್ಶನವನ್ನು ಪಡೆದರು. ೨೮ನೆ ತಾರೀಖಿನಂದು ಅವರು ಕೆಲವು ದೀಕ್ಷಾರ್ಥಿಗಳಿಗೆ ಮಂತ್ರದೀಕ್ಷೆಯನ್ನು ನೀಡಿದರು.

ಮೈಸೂರು ರಾಮಕೃಷ್ಣ ಆಶ್ರಮದಲ್ಲಿಯೇ ಅವರು ತಮ್ಮ ಸಂನ್ಯಾಸೀ ಜೀವನವನ್ನು ಪ್ರಾರಂಭಿಸಿದುದರಿಂದ ಮೈಸೂರಿನ ಬಗ್ಗೆ ಅವರಿಗೆ ತುಂಬ ಆತ್ಮೀಯವಾದ ಸಂಬಂಧವಿದೆ. ಮೈಸೂರಿಗೆ ಬರುವುದೆಂದರೆ 'ಮನೆಗೆ ಬಂದಂತೆ' ಎಂದು ಅವರೇ ಹೇಳುತ್ತಾರೆ.

## ಜಮ್ಮುವಿನಲ್ಲಿ ಹೊಸ ಕಟ್ಟಡಗಳ ಉದ್ಘಾಟನೆ

ಜಮ್ಮುವಿನಲ್ಲಿ ರಾಮಕೃಷ್ಣ ಮಹಾಸಂಘದ ಹೊಸ ಕೇಂದ್ರವು ಸುಮಾರು ಎರಡು ವರ್ಷಗಳ ಹಿಂದೆ ಪ್ರಾರಂಭವಾಗಿದ್ದು ಅನೇಕ ಸೇವಾಚಟುವಟಿಕೆಗಳಲ್ಲಿ ನಿರತವಾಗಿದೆ. ಇತ್ತೀಚೆಗೆ ಆ ಕೇಂದ್ರದಲ್ಲಿ ಒಂದು ಹೊಸ ಪ್ರಾರ್ಥನಾ ಮಂದಿರವೂ ಕೇಂದ್ರದ ಕಾರ್ಯಾಲಯ ಮತ್ತು ಪುಸ್ತಕಕೇಂದ್ರ ಕಟ್ಟಡವೂ ನಿರ್ಮಾಣಗೊಂಡಿದ್ದು ಅವುಗಳ ಉದ್ಘಾಟನಾ ಕಾರ್ಯಕ್ರಮ ಮಾರ್ಚ್ ೨೧, ೨೨, ಮತ್ತು ೨೩ ನೆರವೇರಿತು.

೨೧ರಂದು ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್ ಅವರು ಹೊಸ ಪ್ರಾರ್ಥನಾ ಮಂದಿರವನ್ನು ಉದ್ಘಾಟಿಸಿ ಅಲ್ಲಿ ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರ ಭಾವಚಿತ್ರಗಳನ್ನು ಪ್ರತಿಷ್ಠಾಪನೆ ಮಾಡಿದರು. ಅದೇ ದಿನವೇ ಕಾರ್ಯಾಲಯ ಮತ್ತು ಪುಸ್ತಕಕೇಂದ್ರವನ್ನು ಉದ್ಘಾಟಿಸಿದವರು ರಾಮಕೃಷ್ಣ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತ್ ಸ್ವಾಮಿ ಸ್ಮರಣಾನಂದಜಿ ಮಹಾರಾಜ್ ಅವರು. ವಿಶೇಷ ಪೂಜೆ, ಹವನ, ವೇದಪಠನ, ಭಜನೆ ಮುಂತಾದವುಗಳೊಂದಿಗೆ ಕಾರ್ಯಕ್ರಮ ನೆರವೇರಿತು.

ಅದೇ ದಿನ ಸಂಜೆ ನಡೆದ ಸಾರ್ವಜನಿಕ ಸಭೆಯಲ್ಲಿ ಕೇಂದ್ರ ರಕ್ಷಣಾ ರಾಜ್ಯಮಂತ್ರಿಗಳಾದ ಪ್ರೊ. ಚಮನ್‌ಲಾಲ್ ಗುಪ್ತ ಅವರು ಮುಖ್ಯ ಅತಿಥಿಗಳಾಗಿದ್ದರು. ಸಭೆಯನ್ನುದ್ದೇಶಿಸಿ ಸ್ವಾಮಿ ಆತ್ಮಸ್ಥಾನಂದಜಿ, ಸ್ವಾಮಿ ಸ್ಮರಣಾನಂದಜಿ ಮೊದಲಾಗಿ ಇನ್ನೂ ಕೆಲವು ಸ್ವಾಮೀಜಿಗಳು ಮಾತನಾಡಿದರು. ಅದೇ ಸಂದರ್ಭದಲ್ಲಿ 'ಸಮರ್ಪಣ್' ಎಂಬ ಸ್ಮರಣಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು. ಅಂದು ರಾತ್ರಿ ೯.೩೦ರಿಂದ ಮರುದಿನ ಮುಂಜಾವಿನ ೫.೦೦ ಗಂಟೆಯವರೆಗೆ ಶ್ರೀಶ್ರೀ ಕಾಳೀ ಪೂಜೆ ನಡೆಯಿತು. ಪೂಜೆಯ ಅಂಗವಾಗಿ ಸಾಧು ಸಂನ್ಯಾಸಿಗಳು ಮತ್ತು ಭಕ್ತರಿಂದೊಡಗೂಡಿ ವಿಶೇಷ ಪೂಜೆ, ಹವನ ಮತ್ತು ಕಾಳೀ ಕೀರ್ತನೆಗಳು ನಡೆದವು.

ಮಾರ್ಚ್ ೨೨ರಂದು ಬೆಳಿಗ್ಗೆ ೯.೩೦ರಿಂದ ೧೦.೧೫ರವರೆಗೆ ಕಾಶ್ಮೀರದ ಪ್ರಸಿದ್ಧ ಗಾಯಕರಾದ ಕೈಲಾಶ್ ಮೆಹ್ರ ಅವರಿಂದ ಭಕ್ತಿಗೀತೆಗಳ ಕಾರ್ಯಕ್ರಮವಿತ್ತು. ೧೦.೩೦ರಿಂದ ೧೨ರವರೆಗೆ ಪಂಡಿತ್ ರವಿಶಂಕರರ ಖ್ಯಾತ ಶಿಷ್ಯರಾದ ಗೌರವ್ ಮಜುಮ್ದಾರ್ ಅವರಿಂದ ಸಿತಾರ್ ವಾದನ. ಅಂದು ಸಂಜೆ ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರ ಜಯಂತಿ ಉತ್ಸವವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಹಲವಾರು ಸ್ವಾಮಿಗಳು ದಿವ್ಯತ್ರಯರ ವಿಚಾರವಾಗಿ ಮಾತನಾಡಿದರು. ಅನಂತರ ಜಮ್ಮು ಮತ್ತು ಕಾಶ್ಮೀರದ ಸುಪ್ರಸಿದ್ಧ ಶಾಸ್ತ್ರೀಯ ಗಾಯಕರಾದ ವಿಜಯ ಮಲ್ಲ ಅವರಿಂದ ಸಂಗೀತ ಕಾರ್ಯಕ್ರಮವಿತ್ತು.

ಮಾರ್ಚ್ ೨೩ರಂದು ಬೆಳಿಗ್ಗೆ ೮.೦೦ರಿಂದ ಮಧ್ಯಾಹ್ನ ೧.೦೦ರವರೆಗೆ ಭಕ್ತಸಮ್ಮೇಳನ. ಇದರಲ್ಲಿ ನಾಮಸಂಕೀರ್ತನೆ, ನಿರ್ದೇಶಿತ ಧ್ಯಾನ, ಆಧ್ಯಾತ್ಮಿಕ ಉಪನ್ಯಾಸಗಳು, ಪ್ರಶ್ನೋತ್ತರಗಳು ಇವೇ ಮುಂತಾದ ಕಾರ್ಯಕ್ರಮಗಳಿದ್ದವು. ಅಂದು ಸಂಜೆ ೫.೦೦ರಿಂದ ೭.೦೦ರವರೆಗೆ ಅಂತಾರಾಷ್ಟ್ರೀಯ ಖ್ಯಾತರಾದ ಪಂಡಿತ್ ಭಜನ್ ಸೊಪೋರಿ ಅವರಿಂದ ಸಂತೂರ್ ವಾದನವಿತ್ತು.